


International Journal of Kannada Research
www.kannadajournal.com

**ISSN: 2454–5813**
IJKR 2018; 4(2): 27-30
© 2018 IJKR
www.kannadajournal.com
Received: 11-02-2018
Accepted: 12-03-2018

**ಜಗದೀಶ್ ಬಿ.ಎಸ್.**
ಸಂಶೋಧನ ವಿದ್ಯಾರ್ಥಿ
ಜಾನಪದ ವಿಭಾಗ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು

**Correspondence**
**ಜಗದೀಶ್ ಬಿ.ಎಸ್.**
ಸಂಶೋಧನ ವಿದ್ಯಾರ್ಥಿ
ಜಾನಪದ ವಿಭಾಗ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು

# ಸೋಬಾನೆಪದದ ವೈಶಿಷ್ಟ್ಯತೆ ಮತ್ತು ಸಂರಕ್ಷಣೆ

**ಜಗದೀಶ್ ಬಿ.ಎಸ್.**

**ಪೀಠಿಕೆ**

ಮನುಷ್ಯನ ಆಚರಣೆಯ ಹಿನ್ನಲೆಯಲ್ಲಿ ಕಲೆಗಳು ಉಗಮವಾದವು. ಇವು ಮಾನವನ ಅಭಿವ್ಯಕ್ತಿ, ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳನ್ನೆಲ್ಲ ಒಳಗೊಂಡ ಮನೋಲ್ಲಾಸದ ಒಂದು ಮಾಧ್ಯಮ, ಅವನ ಸೌಂದರ್ಯಪ್ರಜ್ಞೆ ಮತ್ತು ಕಲಾಭಿಜ್ಞತೆಗಳ ಅಭಿವ್ಯಕ್ತಿಯ ಆಯಕಟ್ಟು.

ಪ್ರಕೃತಿಯ ಹಿನ್ನೆಲೆಯಲ್ಲಿ ವಾಸಿಸುವ ಮಾನವನು ಪ್ರಕೃತಿಯಲ್ಲಿ ಕಂಡು ಬರುವಂತಹ ವಸ್ತುಗಳನ್ನು, ಪ್ರಾಣಿಗಳನ್ನು ಅನುಕರಣೆ ಮಾಡಿ ಕೂಗುವುದನ್ನು, ಕುಣಿಯುವುದನ್ನು ಕಲಿತನು. ನಂತರದ ದಿನಗಳಲ್ಲಿ ಕೂಗುವುದಕ್ಕೆ ಮತ್ತು ಕುಣಿಯುವುದಕ್ಕೆ ಒಂದು ಹೊಸ ರೂಪವನ್ನು ಕೊಡುತ್ತಾ ಬಂದನು. ಇದೆ ಹಿನ್ನೆಲೆಯಲ್ಲಿ ಪದಗಳನ್ನು ಕಟ್ಟುವ ಒಂದು ಕಲೆ ಹುಟ್ಟಿಕೊಂಡಿತ್ತು. ಮನುಷ್ಯನ ಜೀವನದಲ್ಲಿ ಮದುವೆಯು ಪ್ರಮುಖ ಘಟ್ಟ ಮತ್ತು ಬದುಕಿನ ಅವಿಸ್ಮರಣೆಯ ಸಂದರ್ಭ. ಈ ಸಂದರ್ಭಗಳಲ್ಲಿ ಪುರೋಹಿತರು ಮಂತ್ರ ಘೋಷಣೆಗಳನ್ನು ಹೇಳಿ ಪೌರೋಹಿತ್ಯದ ಶಾಸ್ತ್ರ ಮಾಡುವುದು ಒಂದು ಬಗೆಯಾದರೆ, ನಮ್ಮ ಜನಪದರು ಸೋಬಾನೆಪದಗಳನ್ನು ಹಾಡುತ್ತ ಮದುವೆಯ ಎಲ್ಲಾ ಶಾಸ್ತ್ರಗಳನ್ನು ಮಾಡುವುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಪೌರೋಹಿತ್ಯ ಶಾಸ್ತ್ರಕ್ಕೆ ಮನ್ನಣೆ ಕೊಟ್ಟಂತೆಯೆ ಜನಪದ ಸಂಪ್ರದಾಯಕ್ಕೂ ಹಿಂದಿನಿಂದಲು ಮನ್ನಣೆ ನೀಡುತ್ತಾ ಬಂದಿದ್ದಾರೆ. ಸೋಬಾನೆ ಪದದ ಧ್ವನಿ ಮದುವೆ ಮನೆಯಲ್ಲಿ ಕೇಳದಿದ್ದರೆ ಆ ಸಂಭ್ರಮ ಅಪೂರ್ಣ ಎಂಬ ಭಾವನೆ ಇದೆ ಅಷ್ಟೊಂದು ಮಹತ್ವ ಈ ಸೋಬಾನೆಪದಗಳಿಗೆ ಇಂದಿಗೂ ಇದೆ.

**ಸೋಬಾನೆ ಪದದ ವೈಶಿಷ್ಟ್ಯತೆ**

ಸೋಬಾನ ಪದವು ಗ್ರಾಮೀಣ ಪ್ರದೇಶದಲ್ಲಿ ಮದುವೆ ಸಂದರ್ಭದಲ್ಲಿ ಹೆಚ್ಚು ಬಳಕೆಯಲ್ಲಿರುವ ದೇಶಿಯ ಸಂಸ್ಕೃತಿಯನ್ನು ಒಳಗೊಂಡಿರುವಂತಹ ಗೀತೆ ಪ್ರಧಾನವಾದಂತಹ ಒಂದು ಪ್ರದರ್ಶನಾತ್ಮಕ ಜನಪದ ಕಲೆ. ಸೋಬಾನೆ ಎಂಬುದು ಶುಭಸೂಚಕದ ಹಾಡು. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸೋಬಾನೆಯನ್ನು ಹಾಡು ಎಂದು ಬಳಸುವುದಿಲ್ಲ ಬದಲಾಗಿ ಪದ ಎಂಬುದಾಗಿ ಕರೆಯುತ್ತಾರೆ. ಇದನ್ನು ಹೆಚ್ಚಾಗಿ ಮತ್ತೈದೆಯರು ಮದುವೆಯ ಸಂದರ್ಭದಲ್ಲಿ ಹೇಳುತ್ತಾರೆ.

ಸೋಬಾನ ಪದವು ದೇಶಿಯ ಸಂಸ್ಕೃತಿಯನ್ನು ಶ್ರೀಮಂತಿಕೆಗೊಳಿಸಲು ಹುಟ್ಟಿಕೊಂಡಂತಹ ಒಂದು ಕಲೆ. ಇದನ್ನು ಹಾಡುಗಳ ಗುಚ್ಚ ಎಂದು ಸಹ ಕರೆಯಬಹುದು. ಅನೇಕ ಪದಗಳು ಅಥವಾ ಹಾಡುಗಳನ್ನು ಒಳಗೊಂಡಿರುವಂತಹ ಒಂದು ಪ್ರದರ್ಶನಾತ್ಮಕವಾದಂತಹ ಗೀತ ಪ್ರಕಾರವಾಗಿದೆ. ಸೋಬಾನೆ ಪದ ಪಾರಂಪರಿಕವಾಗಿ ನಡೆದುಬಂದಂತಹ ಒಂದು ಕಲೆಯಾಗಿದ್ದು, ಇದು ಮೌಖಿಕ ಪರಂಪರೆಯ ಹಿನ್ನೆಲೆಯಲ್ಲಿ ಬಂದಂತಹುದಾಗಿವೆ. ಇದು ಗ್ರಾಮ್ಯ ಭಾಷೆಯ ಸೊಗಡಿನಿಂದ ಕೂಡಿದ್ದಾಗಿದ್ದು ಎಲ್ಲರಿಗೂ ಅರ್ಥವಾಗುವ ಸರಳ ರೀತಿಯಲ್ಲಿ ಇರುತ್ತದೆ.

ಸಂದರ್ಭಕ್ಕೆ ತಕ್ಕಂತೆ ಹುಟ್ಟಿಕೊಳ್ಳುವ ಸೋಬಾನೆ ಪದಗಳು ಆ ಸಂದರ್ಭದಲ್ಲಿ ವ್ಯಕ್ತಿಗಳ ಭಾವನೆಯನ್ನು ಹಾಗೂ ಸನ್ನಿವೇಶವನ್ನು ಪದಗಳ ಮೂಲಕ ಅಭಿವ್ಯಕ್ತಗೊಳಿಸಲಾಗುತ್ತದೆ. ಹಾಡಿನಲ್ಲಿ ಅವರ ಪ್ರತಿಭೆ ಸಂಪತ್ತಿನಿಂದ ಕೂಡಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಪದಗಳ ಬಳಕೆಯನ್ನು ಯಾರಿಗೆ ಹೇಗೆ ಬಳಸಬೇಕೆಂಬುದು ಇದು ಒಳಗೊಂಡಿರುತ್ತದೆ.

ಸೋಬಾನೆ ಪದವನ್ನು ಹೆಚ್ಚಾಗಿ ಮದುವೆ ಸಮಯದಲ್ಲಿ ನಡೆಯುವಂತಹ ಪ್ರತಿಯೊಂದು ಶಾಸ್ತ್ರಕ್ಕೂ ಪ್ರತೇಕವಾದಂತಹ ಒಂದೊಂದು ಪದಗಳನ್ನು ಹಾಡುವದನ್ನು ನಾವು ಕಾಣುತ್ತೇವೆ. ಮದುವೆಯ ಪ್ರತಿಯೊಂದು ಸಂದರ್ಭದಲ್ಲೂ ಸಹ ಆ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಹಾಡಲಾಗುತ್ತದೆ. ಆ.

ಸಂದರ್ಭದಲ್ಲಿ ಇರುವ ವಸ್ತುಗಳನ್ನೆ ಪದಗಳನ್ನಾಗಿಸಿಕೊಂಡು ಮತ್ತು ಆ ಸಂದರ್ಭದಲ್ಲಿ ಹೇಗೆ ಶಾಸ್ತ್ರವನ್ನು ಮಾಡಬೇಕು, ಶಾಸ್ತ್ರದ ಸಮಯದಲ್ಲಿ ಯಾವೆಲ್ಲ ವಸ್ತುಗಳ ಇರಬೇಕು ಅದು ಎಷ್ಟು ಪ್ರಮಾಣದಲ್ಲಿ ಇರಬೇಕು ಮತ್ತು ಅದರ ಪ್ರಾಮುಖ್ಯತೆಯನ್ನು ಇದು ತಿಳಿಸುತ್ತದೆ.

ಸೋಬಾನೆ ಪದಗಳನ್ನು ಗಂಡು ಹೆಣ್ಣಿಗೆ ನೀರುಶಾಸ್ತ್ರ, ಅರಿಶಿನಶಾಸ್ತ್ರ, ಎಣ್ಣೆಶಾಸ್ತ್ರ, ಗಂಡು ಹೆಣ್ಣು ಬರಮಾಡಿಕೊಳ್ಳುವಾಗ, ಮೂರ್ತಶಾಸ್ತ್ರ, ವೀಳ್ಯಶಾಸ್ತ್ರ ಮಾಡುವಾಗ, ಭತ್ತ ಕುಟ್ಟುವಾಗ, ರಥನೀರು ಮಾಡುವಾಗ, ಆರತಿ ತೆಗೆಯುವಾಗ, ಹಸೆಮಣೆಗೆ ಕರೆಯುವಾಗ, ಧಾರೆ ಎರೆಯುವಾಗ, ಹೆಣ್ಣಿಗೆ ಮಡಿಲು ತುಂಬಿಸುವಾಗ, ಅಕ್ಕಿ ತಟ್ಟೆಯಲ್ಲಿ ಉಂಗುರ ತೆಗೆಯುವ ಶಾಸ್ತ್ರ, ಮದುವೆಯಾದಂತಹ ಹೆಣ್ಣು ಗಂಡಿಗೆ ಮನೆಯ ಬಾಗಿಲ ಬಳಿ ತಡೆದು ಹೆಸರು ಕೇಳುವ ಶಾಸ್ತ್ರ ಮುಂತಾದವುಗಳಲ್ಲಿ ಸೋಬಾನೆ ಪದ ಇರಲೇಬೇಕು. ಆಯಾಯ ಸಂದರ್ಭದಲ್ಲಿ ಸೋಬಾನೆ ಪದಗಳು ತನ್ನದೆ ಆದ ವೈಶಿಷ್ಟತೆಯನ್ನು ಹೊಂದಿದ್ದು ನಮ್ಮ ಸಂಸ್ಕೃತಿ, ಸಂಪ್ರದಾಯದ ಪ್ರತೀಕವಾಗಿ ಕಾರ್ಯ ನಿರ್ವಹಿಸಿಸುತ್ತದೆ. ಕೇಳಲು ಇಂಪಾಗಿ ಮನೋರಂಜನಾತ್ಮಕವಾಗಿದ್ದು ಎಲ್ಲರ ಮನ ತಣಿಸುತ್ತದೆ.

**ಮೂರ್ತಶಾಸ್ತ್ರ ಹೇಳುವಂತಹ ಸೋಬಾನೆ ಪದ**

ಬಾರೊ ಬಾರಮ್ಮ ಬಾಳಸಾಸೂರಗಾತಿ
ಬಾಳೆವನದಲ್ಲಿ ಕವಲೊಡೆದು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಬಾಳೆವನದಲ್ಲಿ ಕವಲೊಡೆದು ಸರಸತಿ
ಬಾರಮ್ಮ ಮಗನ ಮದವಿಗೆ, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ನಿಲ್ಲು ನಿಲ್ಲಮ್ಮ ನಿತ್ಯಶಾಸೂರಗಾತಿ
ಪಚ್ಚತೆನಯಲ್ಲಿ ಕವಲೊಡೆದು, ಸೊಬಾನವೆ,
ಸೋಬಾನವೆಲ್ಲ ಶಿವನಿಗೆ ಸೋಬಾನವೆ
ಪಚ್ಚೆತೆನೆಯಲ್ಲಿ ಕವಲೊಡೆದು ಸರಸ್ವತಿ,
ನಿಲ್ಲಮ್ಮ ಮಗನ ಮದುವೆಗೆ,
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಅಕ್ಕ ಸರಸ್ವತಿಯೆ ಚಿಕ್ಕವಳೇ ಗಿರಿದಮ್ಮ,
ಅತ್ತಿ ನೋಡಮ್ಮದುರ ಗಾವ, ಸೊಬಾನವೆ,
ಅತ್ತಿ ನೋಡಮ್ಮ ದುರಗ ದುರಾಣ್ಣವ,
ಮೊಗ್ಗ ತಂದಿವ್ನಿ ಮುಡಿ ಬಾರೋ,
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಯಾರ್ಯಾರು ಬರಬೇಕು,
ಮೂಡ ಮೂಡಲಸುರಿ–ದೇವ, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಮೂಡ ಮೂಡಲ ಸೂರಿ ದೇವರ ಬಂದು
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಆದಿ ನಾರಾಯಣಬರ–ಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಆದಿ ನಾರಾಯಣ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಕೃಷ್ಣ, ಈಶ್ವರ ಬರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಕೃಷ್ಣ, ಈಶ್ವರ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಕುಂಬಾರ ಕುಂಡಯ್ಯ ಬರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಕುಂಬಾರ ಕುಂಡಯ್ಯ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಮಡಿವಾಳ ಮಾಚಯ್ಯಬರ–ಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಮಡಿವಾಳ ಮಾಚಯ್ಯ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಕುರುಬರ ಬೀರಯ್ಯಬರ–ಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ
ಕುರುಬರ ಬೀರಯ್ಯ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಹೊನ್ನಯ ಶರಣ(ಒಲಗ)ಬರ–ಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ
ಹೊನ್ನಯ್ಯ ಶರಣ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ

ಮೂರ್ತ ತರುವಾಗ ಮತ್ತ್ಯಾರು ಬರಬೇಕು,
ಸಾಸಕ್ ಮಾದೇವಿ ಬರಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ
ಸಾಸಕ್ ಮಾದೇವಿ ಅವರ್ ಬಂದು ರಥವೇರಿ,
ಹೋದಿ ಮೂರ್ತವ ತರಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ

ಬಡಗಲಿನಿಂದ ಬಂದ ಬೆಡಗಿನ ಮೂರುತು ಕಂಬ
ಯಾವ ಮೂಲೆಯಲ್ಲಿನಿಲ ಬೇಕು, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಯಾವ ಮೂಲೆಯನ್ನೊದ ನಾವೇನು ಬಲ್ಲೇಮು,
ದೇವರ ಮೂಲೆಯಲ್ಲಿ ನಿಲ್ಲಬೇಕು, ಸೋಬಾನವೆ
ಸೋಬಾನವೆಲ್ಲ, ಶಿವನಿಗೆ ಸೋಬಾನವೆ

ಒಂದು ಕಂಬಕೆ ರನ್ನ ಒಂದು ಕಂಬಕೆ ಚಿನ್ನ
ಮುಂದುಲ್ ಕಂಬಕ್ಕೆ ರವರತುನ, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ
ಮುಂದುಲ್ ಕಂಬಕ್ಕೆ ನವರತನಪಂಚಾರತಿಯ ತಂದು
ಮೂರ್ತಕೆ ಮಡಗಿರೋ, ಸೋಬಾನವೆ
ಸೋಬಾನವೆಲ್ಲ ಶಿವನಿಗೆ, ಸೋಬಾನವೆ

ಈ ಸೋಬಾನೆ ಪದವನ್ನು ಜನಪದರು ಹೇಳುವ ಆಡು ಭಾಷೆಯಲ್ಲಿಯೆ ಬರೆಯಲಾಗಿದೆ. ಉದಾಹರಣೆಗೆ ಹೋಗಿ–ಹೋದಿ, ಬಲ್ಲೇಮು–ಬಲ್ಲೇನು, ಮುಂದಲ್–ಮುಂದಿನ ಇತ್ಯಾದಿ.,

ಮೂರ್ತ ಶಾಸ್ತ್ರವು ಮದುವೆ ಕಾರ್ಯದಲ್ಲಿ ನಡೆಯುವಂತಹ ಮೊದಲನೆ ಶಾಸ್ತ್ರವಾಗಿದ್ದು, ಮೂರ್ತ ಕಂಬವನ್ನು ನೆಡುವುದರಿಂದ ಮದುವೆ ಕಾರ್ಯದಲ್ಲಿ ಯಾವುದೇ ವಿಘ್ನಗಳು ಬರಬಾರದು ಎಂಬ ನಂಬಿಕೆ ಆಶಯದಿಂದ ಅದಕ್ಕೆ ವಿವಿಧ ರೀತಿಯಲ್ಲಿ ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಸೋಬಾನೆ ಪದವನ್ನು ಹಾಡಲಾಗುತ್ತದೆ. ಈ ಸೋಬಾನೆ ಪದದಲ್ಲಿ ಮೂರ್ತ ತರುವಾಗ ನಾವು ಯಾರ ಯಾರನ್ನು ನೆನೆಯಬೇಕು ಮತ್ತು ಯಾರ್ ಯಾರು ಬರಬೇಕು ಎಂಬುದನ್ನು ತಿಳಿಸಿಕೊಡಲಾಗಿದೆ. ಶಾಸ್ತ್ರವನ್ನು ಮಾಡುವುದಕ್ಕಾಗಿ ಮುತ್ತೈದೆಯರು ಬರಬೇಕು, ಹಾಗೇಯೆ ಈ ಜಗತ್ತಿಗೆ ಬೆಳಕನ್ನು ನೀಡುವಂತಹ ಸೂರ್ಯದೇವ ಬರಬೇಕು, ಆದಿನಾರಾಯಣ ಬರಬೇಕು, ಕೃಷ್ಣ ಈಶ್ವರ ಬರಬೇಕು. ಅವರು ಬಂದು ರಥವೇರಿ ಮೂರ್ತ ಕಂಬವನ್ನು ತಂದು ಮದುವೆ ಕಾರ್ಯಕ್ಕೆ ಯಾವುದೇ ತೊಂದರೆಗಳು ಬರದೆ ಇರುವ ಹಾಗೆ ಆಶೀರ್ವಾದ ಮಾಡಬೇಕು.

ಇವರ ನಂತರ ಒಕ್ಕಲಿಗ ಮುದ್ದಯ್ಯ ಬರಬೇಕು, ಕುಂಬಾರ ಗುಂಡಯ್ಯ ಬರಬೇಕು, ಮಡಿವಾಳ ಮಾಚಯ್ಯ ಬರಬೇಕು, ಕುರುಬರ ಬೀರಯ್ಯ ಬರಬೇಕು, ಹೊನ್ನಯ ಶರಣ(ಒಲಗದವರು) ಬರಬೇಕು, ಸಾಸಕ ಮಾದೇವಿ(ಸೋಬಾನೆ ಪದ ಹೇಳುವವರು) ಬರಬೇಕು, ಅಂಬಿಗರ ಚೌಡಯ್ಯಬರಬೇಕು ಮುಂತಾಗಿ ಊರಿನ ಕುಟುಂಬದ ಮುಖಂಡರುಗಳನ್ನು ಮೂರ್ತ ಶಾಸ್ತ್ರಕ್ಕೆ ಬರಬೇಕು ಎಂದು ಆಹ್ವಾನಿಸುತ್ತಾರೆ.

ಮೂರ್ತ ಕಂಬಗಳನ್ನು ತಂದು ಒಂದು ಕಂಬಕ್ಕೆ ರನ್ನ ಮತ್ತು ಒಂದು ಕಂಬಕ್ಕೆ ಚಿನ್ನವನ್ನು ಹಾಕಿ ಸಿಂಗರಿಸಬೇಕು. ಹಾಗೆ ಚಪ್ಪರದ ಐದು ಕಂಬಗಳಿಗೂ ರನ್ನ ಚಿನ್ನ ಹಾಕಿ ಸಿಂಗರಿಸಬೇಕು ಎಂದು ಹಾಡುತ್ತಾ ಹಾಗೇಯೆ ಐದು ರೀತಿಯ ಆರತಿಯನ್ನು ತಂದು ಪೂಜೆ ಮಾಡಬೇಕು ಎಂದು ಹೇಳುತ್ತಾರೆ. ಸೋಬಾನೆ ಪದವು ಮದುವೆಯಲ್ಲಿ ಮೂರ್ತಶಾಸ್ತ್ರದಿಂದ ಶುರುವಾಗಿ ಬೀಗರ ಔತಣ ಕೂಟದವರೆಗೂ ಸೋಬಾನೆ ಪದಗಳನ್ನು ಹೇಳುವುದನ್ನು ನಾವು ಕಾಣಬಹುದಾಗಿದೆ. ಮೂರ್ತ ಶಾಸ್ತ್ರದಲ್ಲಿ ಇರುವಂತೆ ಪ್ರತಿಯೊಂದು ಶಾಸ್ತ್ರಕ್ಕೂ ಆ ಸಂದರ್ಭಕ್ಕೆ ತಕ್ಕಂತಹ ಸೋಬಾನೆ ಪದಗಳನ್ನು ಇಂಪಾಗಿ ಹಾಡುವುದನ್ನು ನಾವು ಕಾಣಬಹುದು. ಈ ಸೋಬಾನೆ ಪದಗಳು ಮನೋರಂಜನಾತ್ಮಕವಾಗಿದ್ದು ಬೀಗರನ್ನು ಜರಿಯುವ ಪದಗಳನ್ನು ಸಹ ಒಳಗೊಂಡಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಮದುವೆಗಳಲ್ಲಿ ಸೋಬಾನೆ ಪದ ಇಲ್ಲದೆ ಇದ್ದರೆ ಯಾವ ಮದುವೆಯು ಕಳೆಕಟ್ಟುವುದಿಲ್ಲ. ಪ್ರತಿಯೊಂದು ಮದುವೆಯ ಎಲ್ಲಾ ಸಂದರ್ಭಗಳಲ್ಲಿ ಸೋಬಾನೆ ಪದಗಳು ಇರಲೇಬೇಕು. ಸೋಬಾನೆ ಪದವನ್ನು ಹೇಳುವವರಿಗೆ ಒಂದು ವಾರ ಅಥವಾ ಹದಿನೈದು ದಿನಗಳ ಮುಂಚಿತವಾಗಿ ವಿಳ್ಯವನ್ನು ಕೊಟ್ಟು ಅವರನ್ನು ಮದುವೆಗೆ ಆಹ್ವಾನಿಸುತ್ತಿದ್ದ ಸಂಪ್ರದಾಯವಿದೆ. ಸೋಬಾನೆ ಪದವನ್ನು ಹೇಳುವವರಲ್ಲಿ ಒಬ್ಬರು ಮುಮ್ಮೇಳದವರಿದ್ದರೆ, ಇಬ್ಬರು ಇಲ್ಲವೇ ಮೂವರು ಹಿಮ್ಮೇಳದವರಿರುತ್ತಾರೆ. ಸೋಬಾನೆ ಪದವನ್ನು ಹೇಳುವವರು ಪ್ರತಿಯೊಂದು ಶಾಸ್ತ್ರಕ್ಕೂ ಪ್ರತೇಕವಾದ ಪದವನ್ನು ಕಟ್ಟುವಂತಹ ಸಾಮರ್ಥವನ್ನು ಹೊಂದಿರುತ್ತಾರೆ. ಇವರು ಒಂದು ದಿನಗಳ ಕಾಲ ಬೇಕಾದರು ಸೋಬಾನೆ ಪದವನ್ನು ಹೇಳುವಂತಹ ಶಕ್ತಿ ಸಾಮರ್ಥವನ್ನು ಹೊಂದಿದ್ದಾರೆ. ಮದುವೆಯ ಯಾವುದೇ ಶಾಸ್ತ್ರದ ಹೆಸರನ್ನು ಹೇಳುತ್ತಿದ್ದಂತೆ ಅದಕ್ಕೆ ಸಂಬಂಧಿಸಿದಂತಹ ಹಾಡುಗಳನ್ನು ಕ್ಷಣ ಮಾತ್ರದಲ್ಲಿ ಹೇಳುತ್ತಾರೆ.

ಸೋಬಾನೆ ಪದಗಳಲ್ಲಿ ಬುದ್ಧಿವಂತಿಕೆಯ ಮಾತುಗಳು, ತಿಳುವಳಿಕೆಯ ಮಾತುಗಳು ಇರುತ್ತವೆ. ಸೋಬಾನೆ ಎನ್ನುವಂತಹದ್ದು ಅನಕ್ಷರಸ್ಥರ ಸೃಷ್ಟಿಯಾಗಿ ಮೌಖಿಕ ಪರಂಪರೆಯ ಮೂಲಕ ಒಂದು ತಲೆ ಮಾರಿನಿಂದ ಮತ್ತೊಂದು ತಲೆಮಾರಿಗೆ ಇದು ಸಾಗಿಕೊಂಡು ಬಂದಿರುವಂತಹದ್ದಾಗಿದೆ.

**ಸೋಬಾನೆಪದದ ಸಂರಕ್ಷಣೆ:**

ಕೆಲವು ವರ್ಷಗಳ ಹಿಂದೆ ಸೋಬಾನೆ ಪದಗಳಿಗೆ ಎಲ್ಲಿಲ್ಲದ ಬೇಡಿಕೆ ಇತ್ತು. ಸೋಬಾನೆಯವರು ಬಗೆ–ಬಗೆಯ ಪದಗಳನ್ನು ಕಟ್ಟಿ ಹಾಡುತ್ತಿದ್ದರಿಂದ ಅವರಿಗೆ ಎಲ್ಲರಿಂದ ಪ್ರಶಂಸ್ಥೆಗಳು ದೊರೆಯುತ್ತಿದ್ದವು. ಇವರು ಸೋಬಾನೆಪದವನ್ನು ಹೇಳುವುದಕ್ಕಾಗಿ ಅಕ್ಕಪಕ್ಕದ ಊರಿನವರಿಂದಲೂ ಆಹ್ವಾನ ಬರುತಿತ್ತು. ಸೋಬಾನೆ ಪದ ಹೇಳವ ಸೋಬಾನೆಗಾರ್ತಿಯರಿಗೆ ಅಪಾರವಾದ ಗೌರವವಿತ್ತು. ಇದು ದೇವರ ಕೆಲಸ ಎಂಬ ಭಾವನೆ ಅವರಲ್ಲಿ ಮನೆಮಾಡಿತ್ತು. ಇವರು ಸೋಬಾನೆ ಪದವನ್ನು ಯಾವುದೇ ಹಣಕ್ಕಾಗಿ ಅಥವಾ ಆಮಿಷೆಗಳಿಗೆ ಒಳಗಾಗಿ ಹಾಡುತ್ತಿರಲಿಲ್ಲ. ಇವರನ್ನು ಆಮಂತ್ರಿಸಿದವರು ಕೂಡ ಇವರಿಗೆ ಯಾವುದೇ ರೀತಿಯ ಹಣವನ್ನು ಕೊಡುತ್ತಿರಲಿಲ್ಲ. ಬದಲಾಗಿ ಎಲೆ ಅಡಿಕೆ ಜೊತೆಯಲ್ಲಿ ಒಂದು ಬಾಳೆಹಣ್ಣನ್ನು, ಸೀರೆ ರವಿಕೆ ಕೊಟ್ಟುಕಳುಹಿಸುತ್ತಿದ್ದರು. ಸೋಬಾನೆಯವರು ಇದಕ್ಕೆ ಸಂತೋಷದಿಂದ ಸ್ವೀಕರಿಸುತ್ತಾರೆ. ಇವರಲ್ಲಿ ಯಾವುದೇ ಸ್ವತಃ ಮನೋಭಾವ ಇರುತ್ತಿರಲಿಲ್ಲ. ಸೋಬಾನೆಯವರು ಇಲ್ಲದೆ ಇದ್ದರೆ ಯಾವ ಮದುವೆಯು ಅರ್ಥಪೂರ್ಣ ಸಾರ್ಥಕತೆ ಕಾಣುವುದಿಲ್ಲ ಎಂಬ ಭಾವನೆ ನಮ್ಮ ಜನಪದರಲ್ಲಿ ಮನೆ ಮಾಡಿದೆ.

ಪ್ರಸ್ತುತ ದಿನಗಳಲ್ಲಿ ನಾಗರೀಕತೆ ಬೆಳೆದಂತೆ ಜನರು ತಮ್ಮ ಮೂಲ ಸಂಸ್ಕೃತಿಯನ್ನು ಮರೆತು ತಮ್ಮದಲ್ಲದಂತಹ ಮತ್ತೊಂದು ಸಂಸ್ಕೃತಿಗೆ ಆಕರ್ಷಿಕರಾಗುತ್ತಿದ್ದಾರೆ. ಜಾಗತೀಕರಣದಿಂದಾಗಿ ವಿದೇಶಿ ಸಂಸ್ಕೃತಿಯ ಹಾವಳಿ ಹೆಚ್ಚಾಗಿ ಪರಂಪರಿಕವಾಗಿ ಬಂದಂತಹ ಕಲೆಗಳು ಇಂದು ಕಣ್ಮರೆಯಾಗುತ್ತಿವೆ. ಪ್ರತಿಯೊಂದು ಊರಿನಲ್ಲೂ ಸೋಬಾನೆ ಹೇಳುವವರು ಇರುತ್ತಿದ್ದರು ಆದರೆ ಈಗ ಅವರ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದೆ ಮದುವೆಗಳು ವಾರಗಟ್ಟಲೆ ನಡೆಯುತ್ತಿದ್ದವು ಆ ಸಂದರ್ಭದಲ್ಲಿ ಒಂದು ವಾರಗಳ ಕಾಲ ಸೋಬಾನೆಯವರಿಗೆ ಅವಕಾಶಸಿಗುತ್ತಿತ್ತು. ಆದರೆ ಈಗಿನ ಮದುವೆಗಳು ಒಂದು ದಿನದಿಂದ ಒಂದು ಗಂಟೆ ಒಳಗೆ ಮುಗಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದಾಗಿ ಸೋಬಾನೆಯು ತನ್ನ ಅಸ್ತಿತ್ವವನ್ನು ಹಂತ ಹಂತವಾಗಿ ಕಳೆದುಕೊಳ್ಳುತ್ತಿದೆ.

ಇಂದು ಬಹುಮಾದ್ಯಮಗಳ ಪಾತ್ರ ಬಹಳ ಮುಖ್ಯವಾದುದಾಗಿದೆ. ಚಲನಚಿತ್ರ, ದೂರದರ್ಶನ, ರೇಡಿಯೊಗಳು ಆಧುನಿಕ ಸಂಸ್ಕೃತಿಯನ್ನು ಹೆಚ್ಚು ಪ್ರಸಾರ ಮಾಡುತ್ತಿರುವುದರಿಂದ ಜನರು ಹೆಚ್ಚು ಆಕರ್ಷಕರಾಗುತ್ತಿದ್ದಾರೆ. ಇದರಿಂದಾಗಿ ಜನಪದ ಕಲಾವಿದರಿಗೆ ಪ್ರೋತ್ಸಾಹ ಕಡಿಮೆಯಾಗಿ ಜನಪದ ಕಲಾವಿದರು ಕಲೆಯಿಂದ ದೂರಾಗುತ್ತಿದ್ದಾರೆ. ನವನಾಗರೀಕತೆ ಎಂಬ ಶಕ್ತಿಯುತ್ತ ಬಿರುಗಾಳಿಯಿಂದಾಗಿ ಜನಪದ ಮೂಲ ಸಂಸ್ಕೃತಿಯ ಬುಡ ಕುಸಿದು

ಬೀಳಲು ಶುರುವಾಗಿದೆ.

ಪ್ರತಿಯೊಂದು ಸಾಹಿತ್ಯ ಮತ್ತು ಕಲೆಗಳಿಗೆ ಜಾನಪದವೆ ಮೂಲ ಬೇರಾಗಿರುವುದರಿಂದ ಜಾನಪದವನ್ನು ಉಳಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಮಾಡುವುದರಿಂದ ನಶಿಸಿಹೋಗುತ್ತಿರುವ ಸೋಬಾನೆ ಪದಗಳು ಮತ್ತೆ ಚಿಗುರುತ್ತವೆ. ಅದು ಜನಪದರ ಬಾಳಿಗೆ ಬೆಳಕಾಗುತ್ತವೆ. ಗ್ರಾಮ ಜೀವನದ ಹಸಿರು ಮತ್ತು ಉಸಿರಾಗಿರುವಂತಹ ಸೋಬಾನೆ ಪದಗಳನ್ನ ಉಳಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಸೋಬಾನೆ ಪದಗಳ ಉಳಿವಿಗಾಗಿ ಸಂಘ – ಸಂಸ್ಥೆಗಳು, ಸರ್ಕಾರ ಮತ್ತು ಜನರ ಸಹಕಾರ ತುಂಬ ಮುಖ್ಯವಾಗಿದೆ. ಸರ್ಕಾರವು ಸೋಬಾನೆ ಪದವನ್ನು ಹಾಡುವಂತಹ ಕಲಾವಿದರಿಗೆ ಇಂದು ಪ್ರತಿತಿಂಗಳು ಗೌರವಧನವನ್ನು ನೀಡುತ್ತಿರುವುದರ ಜೊತೆಗೆ ಅವರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಒದಗಿಸಬೇಕು. ಹಿರಿಯ ಕಲಾವಿದರಿಂದ ಕಿರಿಯ ಕಲಾವಿದರಿಗೆ ತರಬೇತಿಗಳನ್ನು ಕೊಡುವಂತಹ ಪ್ರಯತ್ನಗಳು ಹೆಚ್ಚಾಗಿ ಆಗಬೇಕಾಗಿದೆ. ಸೋಬಾನೆ ಪದವನ್ನು ಕೇವಲ ಪುಸ್ತಕದಲ್ಲಿ ದಾಖಲೆಯ ರೂಪದಲ್ಲಿ ಸಂಗ್ರಹಿಸಿದರೆ ಸಾಲದು ಅದನ್ನು ಹಾಡುವ ದಾಟಿಯನ್ನು ಕಲಿಯಬೇಕಾಗಿದೆ. ಸೋಬಾನೆಯವರು ಪದವನ್ನು ಹೇಳುವಾಗ ಒಂದೊಂದು ಶಾಸ್ತ್ರಕ್ಕೂ ಒಂದೊಂದು ರಾಗದಲ್ಲಿ ಹಾಡುತ್ತಾರೆ. ಅವರ ರಾಗದಲ್ಲಿ ಏರಿಳಿತವಿರುತ್ತದೆ. ತನ್ನದೆ ಆದ ನೈಜತೆ ಇರುತ್ತದೆ ಆದ್ದರಿಂದ ಮೂಲ ಕಲಾವಿದರಿಂದ ತರಬೇತಿಗಳನ್ನು ಕೊಡಿಸಬೇಕಾಗಿದೆ.

ಸೋಬಾನೆ ಕಲಾವಿದರಿಗೆ ಸ್ಪರ್ಧೆಗಳನ್ನು ಏರ್ಪಡಿಸುವುದು, ರೇಡಿಯೊ ಮತ್ತು ದೂರದರ್ಶನದಲ್ಲಿ ಅವರಿಗೆ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ನೀಡುವುದು. ಪ್ರಸ್ತುತ ಸರ್ಕಾರಿ ವಾಹಿನಿಗಳಲ್ಲಿ ಮಾತ್ರ ಸೋಬಾನೆ ಪದಗಳು ಪ್ರಸಾರವಾಗುತ್ತಿವೆ. ಇದನ್ನು ಖಾಸಗಿ ಚಾನಲ್‌ಗಳಿಗೂ ಸಹ ವಿಸ್ತರಿಸಿಕೊಳ್ಳಬೇಕು. ಶಿಕ್ಷಣ ಇಲಾಖೆಯವರು ಸೋಬಾನೆ ಪದಗಳನ್ನು ಕುರಿತು ಪಠ್ಯ–ಪುಸ್ತಕದಲ್ಲಿ ಅಳವಡಿಸಿ ಕಾರ್ಯರೂಪಕ್ಕೆ ತರುವುದು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸೋಬಾನೆ ಪದವನ್ನು ಹಾಡಿಸುವುದು. ಇನ್ನು ಹತ್ತು ಹಲವರು ಕಾರ್ಯಕ್ರಮಗಳನ್ನು ರೂಪಿಸಿ ಸೋಬಾನೆ ಪದಗಳ ಉಳಿವಿಗೆ ಸರ್ಕಾರ ಕಾರ್ಯಪ್ರವೃತ್ತರಾಗಬೇಕು.

ಇಂದು ನಕಲಿ ಕಲಾವಿದರು ಸೃಷ್ಟಿಯಾಗುತ್ತಿದ್ದು ಸರ್ಕಾರದಿಂದ ಸಿಗುವಂತಹ ಸವಲತ್ತುಗಳನ್ನು ಪಡೆಯುವುದಕ್ಕಾಗಿ ಅಸಲಿ ಕಲಾವಿದರಿಗೆ ಅನ್ಯಾಯ ಎಸಗುತ್ತಿದ್ದಾರೆ ಅಂತಹವರ ಬಗ್ಗೆ ಗಮನಹರಿಸಬೇಕು. ಹೆಚ್ಚು ಮೂಲ ಕಲಾವಿದರನ್ನು ಗುರುತಿಸಿ ಅವರಿಗೆ ಹೆಚ್ಚು ಸವಲತ್ತುಗಳನ್ನು ಕೊಡಬೇಕು. ಎಷ್ಟೊ ಹಳ್ಳಿಗಳಲ್ಲಿ ಎಲೆ ಮರೆಯ ಕಾಯಿಯ ಹಾಗೆ ಬಹಳಷ್ಟು ಸೋಬಾನೆ ಕಲಾವಿದರು ಇದ್ದಾರೆ. ಅವರನ್ನು ಗುರುತಿಸಿ ಮುಖ್ಯವಾಹಿನಿಗೆ ತರಬೇಕು. ಅವರಿಂದ ಸೋಬಾನೆ ಪದಗಳನ್ನು ಸಂಗ್ರಹಿಸಬೇಕು.

ಶಾಲೆ ಮತ್ತು ಕಾಲೇಜಿನಲ್ಲಿ ಮಕ್ಕಳಿಗೆ ಸೋಬಾನೆಪದವನ್ನು ಹೇಳಿಕೊಡುವುದರಿಂದ ಮಕ್ಕಳಿಗೆ ಸೃಜನಶೀಲ ಶಕ್ತಿಯು ಉಂಟಾಗುತ್ತದೆ. ಅವರು ಸಹ ಹೊಸ ಹೊಸ ಪದಗಳನ್ನು ಕಟ್ಟುವುದಕ್ಕೆ, ರಾಗ ಸಂಯೋಜನೆಯನ್ನು ಮಾಡುವುದಕ್ಕೆ ಕಾರಣವಾಗುತ್ತದೆ. ಅವರ ನೆನಪಿನ ಶಕ್ತಿಯು ವೃದ್ಧಿಸುತ್ತದೆ. ಭಾವನೆಗಳನ್ನು ಹಾಡಿನ ಮೂಲಕ ಹೇಗೆ ವ್ಯಕ್ತಪಡಿಸಬಹುದು ಎಂಬುದು ತಿಳಿಯುತ್ತದೆ. ಯುವತಿಯರು ಹೆಚ್ಚಾಗಿ ಇವುಗಳನ್ನು ಕಲಿತುಕೊಂಡು ತಮ್ಮ ಸ್ನೇಹಿತರ ಹಾಗೂ ಸಂಬಂಧಿಕರ ಮದುವೆಯ ಸಂದರ್ಭದಲ್ಲಿ ಹಾಡಲು ಉತ್ತೇಜಿಸಬೇಕು. ಇನ್ನು ಒಂದು ಅಥವಾ ಎರಡು ತಲೆಮಾರಿನವರು ಅಷ್ಟೆ ಸೋಬಾನೆಪದವನ್ನು ಹೇಳುವವರು ಇರುವುದು. ಇವರ ನಂತರದ ಕಾಲದಲ್ಲಿ ಸೋಬಾನೆ ಪದಗಳನ್ನು ಧ್ವನಿ ಮುದ್ರಣದ ಮೂಲಕ ಕೇಳಬೇಕಾಗುತ್ತದೆ. ಆದ್ದರಿಂದ ನಮ್ಮ ಸಂಸ್ಕೃತಿಯ ಒಂದು ಭಾಗವಾದಂತಹ ಸೋಬಾನೆಪದವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಆಕರ ಗ್ರಂಥಗಳು**


1. ಕಾಳೇಗೌಡ ನಾಗವಾರ ಮತ್ತು ಆನಂದಮೂರ್ತಿ(ಸಂ): ಗರಿಗೆದರಿದ ನವಿಲು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–06
2. ಹೆಚ್.ಎಲ್.ನಾಗೇಗೌಡ(ಸಂ): ಸೋಬಾನನೆ ಚಿಕ್ಕಮ್ಮನ ಪದಗಳು
3. ಅರವಿಂದ ಮಾಲಗತ್ತಿ(ಪ್ರ.ಸಂ): ಜಾನಪದ ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ


**ವಕ್ತೃ ವಿವರ**

1. ಬನ್ನೂರುಕೆಂಪಮ್ಮ, ಸೋಬಾನೆ ಪದದ ಮುಮ್ಮೇಳದವರು, ಬನ್ನೂರು ಗ್ರಾಮ, ಟಿ.ನರಸೀಪುರ ತಾ..